# ನೀವು ಕೇಳಿದಿರಿ?

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಹೆಂಗಸರಿಗೇಕೆ ಹೆಚ್ಚು ಸೀರೆಗಳನ್ನು ಹೊಂದುವ ಹುಚ್ಚು ಇರುತ್ತದೆ?



ಸ್ತ್ರೀ ಪ್ರಕೃತಿ, ಪ್ರಕೃತಿಗೆ ನಿತ್ಯನೂತನತೆಯೇ ಶೋಭೆ ಎಂದಳಾಕೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ವಯಸ್ಸಾದ ತಾಯಿಗೂ, ವಯಸ್ಸಾದ ಮರಕ್ಕೂ ಏನು ವ್ಯತ್ಯಾಸ?

ವಯಸ್ಸಾದ ಮರ ಕೋಲುಗಳಾಗಿ ಹಲವಾರು ವಯಸ್ಸಾದ ತಾಯಿಯರಿಗೆ ಆಸರೆಯಾಗುತ್ತದೆ.

ಎಚ್.ಎಸ್. ನಂದಕುಮಾರ್, ಮಂಗಳೂರು

ಈ ಕೊರೊನಾ ಕಾಲದಲ್ಲಿ ಹೊಸ ಉದ್ಯಮ ಪ್ರಾರಂಭಿಸಬೇಕೆಂದಿದ್ದೇನೆ. ಅಳಲೆಕಾಯಿ ಪಂಡಿತನಾಗಲೋ, ಆಶ್ರಮ ಕಟ್ಟಲೋ?

ಆಶ್ರಮವನ್ನೇ ಕಟ್ಟಿ. ಮಠಾಧೀಶನಾದರೆ ವಂಶಪಾರಂಪರ್ಯವಾಗಿ ಕುಳಿತು ಉಣ್ಣಬಹುದು.

ವಿ. ಹೇಮಂತಕುಮಾರ್, ಬೆಂಗಳೂರು

ಲಿಪ್‌ಸ್ಟಿಕ್ ಹುಡುಗಿಯರಿಗೆ ಓಕೆ. ಆಂಟಿಯರಿಗೆ ಏಕೆ?



ಫಿಸಿಕಲಿ ಆಂಟಿ ಆದರೂ ಮೆಂಟಲಿ ಪರ್ಮನೆಂಟ್ ಹುಡುಗಿಯರೇ ಆದ್ದರಿಂದ.

ಬಿ.ಆರ್. ಗಿರೀಶ್, ಬೆಂಗಳೂರು

ತಾಳಿದವನು ಬಾಳಿಯಾನು. ತಾಳಿ ಕಟ್ಟಿದವನು?

ಮನೆಯಲ್ಲಿ ತಾಳಿಕೋಟೆಯ ಕದನವಾಗದಂತೆ ಎಚ್ಚರ ವಹಿಸಿಯಾನು.

ಅಮರಯ್ಯಾ ಪತ್ರಿಮಠ, ಸುರಪುರ

ಜೀವನದ ಅಮೂಲ್ಯ ಕ್ಷಣಗಳಾವುವು?

ಕೊರೊನಾದಿಂದ ತಪ್ಪಿಸಿಕೊಂಡ ಪ್ರತಿ ಕ್ಷಣವೂ ಅಮೂಲ್ಯವೇ.

ದೀಪಕ್ ಘಾಟಿ, ಬೆಂಗಳೂರು

ಸೂಕ್ತ ಸಮಯ ಬಂದಾಗ ಎಲ್ಲ ಬಯಲು ಮಾಡುವೆ ಎನ್ನುವ ರಾಜಕಾರಣಿಗೆ ಆ ಸಮಯ ಬರುವುದೆಂದು?

ಅವರೇ ಬಯಲು ಸೇರಿ, ಅವರಿಂದಾದ ಸೂತಕ ಸಮಯ ಮುಗಿದರೂ ಬರುವುದಿಲ್ಲ.

ಅನಸೂಯ ಟಿ. ಕೇದಿಗೆಮನೆ

ಪಾಪಕರ್ಮ ಮಾಡಿದವರಿಗೆ ಭಗವಂತ ಖಂಡಿತವಾಗಿಯೂ ಶಿಕ್ಷಿಸುತ್ತಾನಾ ರಾಮ್?

ಅವನ ಕೋರ್ಟಿನಲ್ಲಿ ವಿಚಾರಣೆಯಾಗಿ ತೀರ್ಪು ಬರುವವರೆಗೆ ಪಾಪಿ ಬದುಕಿದ್ದರೆ!

ಬಿ.ಆರ್. ಉಷಾ, ಬೆಂಗಳೂರು

ಈಗಿನ ಕಾಲದ ಜೋಕ್ಸ್‌ಗೂ, ಹಳೆಯ ಕಾಲದ ಜೋಕ್ಸ್‌ಗೂ ಏನು ವ್ಯತ್ಯಾಸ?

ಹಳೆಯ ಕಾಲದ್ದೆಲ್ಲ ಅಡಲ್ಟ್ ಜೋಕ್ಸ್ ಎಲ್ಲ ಜೋಕುಗಳಿಗೂ 18ಕ್ಕಿಂತ ಹೆಚ್ಚು ವಯಸ್ಸಾಗಿದೆ.

ಮಲ್ಲಿಕಾರ್ಜುನ, ಸುರಧೇನುಪುರ

ಡಾ. ರಾಜ್‌ರವರು ಬಂಗಾರದ ಮನುಷ್ಯರಾದದ್ದು ಅಭಿನಯಂದಿದಲೋ, ಗುಣದಿಂದಲೋ?

ಮೊದಲಿಗೆ ಅಭಿನಯಂದಿದಲೇ. ಕ್ರಮೇಣ ಅವರೇ ಪಾತ್ರವಾಗಿಬಿಟ್ಟರು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಪ್ರಾಮಾಣಿಕತೆಗೂ, ಬುದ್ಧಿವಂತಿಕೆಗೂ ಏನು ವ್ಯತ್ಯಾಸ ಸಾರ್?

ಪ್ರಾಮಾಣಿಕತೆ ಗುಣ. ಅದನ್ನು ಎಲ್ಲೆಲ್ಲಿ ಎಷ್ಟೆಷ್ಟು ತೋರಿಸಬೇಕೆಂದು ತಿಳಿಯುವುದೇ ಬುದ್ಧಿವಂತಿಕೆ.

ನಾಜ್ಯೋತಿ, ಹೂವಿನಹಡಗಲಿ

ಇಂಗ್ಲಿಷನ್ನು ಆಡಳಿತಭಾಷೆ ಮಾಡಿದರೆ ಒಪ್ಪುವವರು ನಮ್ಮದೇ ಹಿಂದಿಯನ್ನು ಮಾಡಿದರೆ ಹೇರಿಕೆ ಎನ್ನುವುದೇಕೆ?

ಹಿಂದಿಗೆ ಇಂಗ್ಲಿಷ್‌ಗಿರುವಷ್ಟು ಗ್ಲ್ಯಾಮರ್ರೂ ಇಲ್ಲ, ಗ್ಲ್ಯಾಮರ್ರೂ ಇಲ್ಲವಾದ್ದರಿಂದ.

ರಾಮಸ್ವಾಮಿ ಭೀಮನಕಟ್ಟೆ, ಬೆಂಗಳೂರು

ಐಟಿ, ಇಡಿ, ಸಿಬಿಐ ರೈಡ್ ಆದವರ ಮನೆಗಳಿಗೆ ಸ್ವಾಮಿಗಳು ಭೇಟಿ ನೀಡುವ ಉದ್ದೇಶ...?

ನಿನಗೆ ಮೋಕ್ಷ ನೀಡಲಾಗದಿದ್ದರೂ ನಿನ್ನ ಹಣಕ್ಕೆ ಮೋಕ್ಷ ನೀಡಲು ನಮ್ಮಲ್ಲಿ ದಾರಿಯುಂಟು ಎನ್ನಲು.

## ಬಹುಮಾನಿತ ಪ್ರಶ್ನೆ

ಎಸ್.ಸಿ. ರಮೇಶ್, ಮೈಸೂರು

ದ್ರೌಪದಿಗೇನೋ ಮುಡಿ ಬಿಚ್ಚಲು ಸೇಡಿನ ಕಾರಣವಿತ್ತು. ಈಗಿನ ಯುವತಿಯರ ಬಿಚ್ಚಿದ ಮುಡಿಗೆ ಕಾರಣವೇನು?

ಕೂದಲನ್ನು ಕಣ್ಣಿನ ಬಳಿ ಬೀಳಿಸಿಕೊಳ್ಳುತ್ತಾ ಕೈಯನ್ನು ವಿಂಡ್‌ಷೀಲ್ಡ್ ವೈಪರ್‌ನಂತೆ ಬಳಸುವ ಆಟವಾಡಲು.

ಹೆಚ್.ವಿ. ಶ್ರೀಧರ್, ಬೆಂಗಳೂರು

ಆಸ್ತಿಯಲ್ಲಿ ಹಕ್ಕು ಕೇಳುವ ಒಡಹುಟ್ಟಿದವರು ಅಪ್ಪನ ಸಾಲದಲ್ಲಿ ಒಡೆದು ಹುಟ್ಟಿದವರಂತೆ ಆಡುವರಲ್ಲಾ?

ಆಸ್ತಿ ಮುಂದಿನದು; ಸಾಲ ಹಿಂದಿನದು. ಅವರದೇನಿದ್ದರೂ ಮುಂದಾಲೋಚನೆಯಷ್ಟೆ.

ರಮಾನಂದ ಶರ್ಮಾ, ಬೆಂಗಳೂರು

ಈಗ ದೇಶದಲ್ಲಿ ಇರುವುದು ಪ್ರಜಾಪ್ರಭುತ್ವವೋ, ಹೈಕಮಾಂಡ್ ಪ್ರಭುತ್ವವೋ?

ಮಜಾಪ್ರಭುತ್ವದ್ದು. ಭ್ರಷ್ಟಾಚಾರ, ವಂಶಾಡಳಿತ ತಡೆಯುವ ಯಾವ ಪಕ್ಷವೂ ನಮ್ಮಲ್ಲಿಲ್ಲ, ಬರಲ್ಲ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ

ಗಾಳಿ ಬಂದಾಗ ತೂರಿಕೊ, ಲಸಿಕೆ ಸಿಕ್ಕಾಗ ಹಾಕಿಸಿಕೊ. ಸರಿ ಅಲ್ವಾ ರಾಮ್?



ಲಸಿಕೆ ಸಿಕ್ಕಾಗ ಮೂಗು ಬಾಯ್ಮುಚ್ಚೊಂಡು ಹಾಕಿಸಿಕೊ ಎನ್ನುತ್ತೆ ಸರ್ಕಾರ.

ಆರ್. ಮಧುಸೂದನ್, ಹಾಸನ

ಹಣ ಎಂದರೂ ಒಂದೇ, ಕಾಸು ಎಂದರೂ ಒಂದೇ. ಹೀಗಿರುವಾಗ ಹಣಕಾಸು ಏಕೆ?

ಕಾಸು ಚಿಲ್ಲರೆ. ಹಣದ ಜೊತೆ ಚಿಲ್ಲರೆ ಬುದ್ಧಿಯೂ ಇದ್ದೇ ಇರುತ್ತದೆಂದು ಸೂಚಿಸಲು.

ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

ಅರ್ಥ, ಅನರ್ಥ, ಗೂಢಾರ್ಥ, ಪ್ರಶ್ನಾರ್ಥ, ಪ್ರತ್ಯರ್ಥ ಇವು ಮತ್ತೆ ಎಲ್ಲಿಯವರೆಗೆ?

ಇವೆಲ್ಲವನ್ನೂ ಮೀರುವ ಸಿದ್ಧಾರ್ಥನಾಗುವ ವರೆಗೆ.

**ರಾಮ್**

ಪ್ರಶ್ನೆ ಕಳುಹಿಸಲು: editorsu@sudha.co.in